ಕರ್ನಾಟಕ ಸರ್ಕಾರ, ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು

ಶಿಕ್ಷಕರ ವರ್ಗಾವಣೆ ಬಗ್ಗೆ ದಿ;– 11–06–2013

| ಕ್ರಸಂ | ಕೋರಿರುವ ಮಾಹಿತಿ | ಸ್ಪಷ್ಟೀಕರಣ |
|---|---|---|
| 01 | ಮೊದನೇ ಬಾರಿಗೆ ಪರಸ್ಪರ ವರ್ಗಾವಣೆ ಬಯಸುವವರಿಗೆ 2 ವರ್ಷ ಪೂರ್ತಿಯಾಗಿದ್ದು ಪರಿವೀಕ್ಷಣ ಅವಧಿ ಘೋಷಣೆ ಆಗಿದ್ದಲ್ಲಿ ಪರಿಗಣಿಸ ಬಹುದೇ ? | 01 ಖಾಯಂ ಪೂರ್ವ ಅವಧಿಯು ಘೋಷಣೆಯಾಗಿರ ಬೇಕು<br>02 ಈಗಾಗಲೇ ವರ್ಗಾವಣೆ ಹೊಂದಿರುವ ಶಿಕ್ಷಕರು ಪ್ರಸ್ತುತ ಸ್ಥಳದಲ್ಲಿ ಕನಿಷ್ಠ 3 ವರ್ಷಕ್ಕಿಂತ ಹೆಚ್ಚಿನ ಅವಧಿಯ ಸೇವೆ ಸಲ್ಲಿಸಿರ ಬೇಕು |
| 02 | ಹೆಚ್ಚುವರಿಯಾದ ಶಿಕ್ಷಕರು ಪರಸ್ಪರ ವರ್ಗಾವಣೆಗೆ ಅರ್ಜಿ ಸಲ್ಲಿಸಿದಲ್ಲಿ 2013–14 ನೇ ಸಾಲಿನ ಅಥವಾ ಹಿಂದಿನ ವರ್ಷದ ಶಾಲೆಗಳು ಎನ್ನುವ ಬಗ್ಗೆ ವಿವರ ಇರುವುದಿಲ್ಲ | ಹಿಂದಿನ ವರ್ಷ ಹಾಗೂ ಈ ವರ್ಷ ಹೆಚ್ಚುವರಿ ಎಂದು ಗುರುತಿಸಲ್ಪಟ್ಟಿದ್ದಲ್ಲಿ ಪರಸ್ಪರ ವರ್ಗಾವಣೆಗೆ ಅವಕಾಶವಿರುವುದಿಲ್ಲ ಅದರೆ ಕೋರಿಕೆ ವರ್ಗಾವಣೆಗೆ ಅರ್ಜಿ ಸಲ್ಲಿಸ ಬಹುದು |
| 03 | ಪತಿ –ಪತ್ನಿ ಪ್ರಕರಣಕ್ಕೆ ಸಂಬಂದಿಸಿದಂತೆ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರ ನೇಮಕಾತಿ ಪ್ರಾಧಿಕಾರದಿಂದ ಆಯ್ಕೆಯಾದವರನ್ನು ಸರಕಾರಿ ನೌಕರರೆಂದು ಪರಿಗಣಿಸ ಬಹುದೇ ? | ಪರಿಗಣಿಸಲಾಗುವುದು |
| 04 | ಪರಸ್ಪರ ವರ್ಗಾವಣೆ ಬಯಸುವ ಶಿಕ್ಷಕರು ಒಬ್ಬರಿಗೆ ನಿವೃತ್ತಿಯಾಗಲು ಇನ್ನೂ ಎರಡು ತಿಂಗಳು ಮಾತ್ರ ಇದೆ. ಇವರಿಗೆ ಪರಸ್ಪರ ವರ್ಗಾವಣೆಗೆ ಪರಗಣಿಸ ಬಹುದೇ ? | ಈ ರೀತಿಯ ಪರಸ್ಪರ ವರ್ಗಾವಣೆಗೆ ಅವಕಾಶವಿರುವುದಿಲ್ಲ |
| 05 | ಪತಿ– ಪತ್ನಿ ಪ್ರಕರಣದಲ್ಲಿ ಅಂತರ ಘಟಕ ವರ್ಗಾವಣೆಗೆ ಬಯಸುವವರು ಪತಿ ಅಥವಾ ಪತ್ನಿ ವಾಸವಿರುವ ಬ್ಲಾಕ್ ಹಾಗೂ ಅದೇ ಜಿಲ್ಲೆಯ ಇತರೆ ಬ್ಲಾಕ್‌ಗಳಲ್ಲಿ ಖಾಲಿ ಇರುವ ಖಾಲಿ ಇರುವ ಶಾಲೆಗೆ ವರ್ಗಾವಣೆಗೆ ಕೋರ ಬಹುದೇ ? | ಪತಿ– ಪತ್ನಿ ಪ್ರಕರಣದಡಿಯಲ್ಲಿ ಅಂತರ ಘಟಕ ವರ್ಗಾವಣೆ ಬಯಸುವವರು ಪತಿ ಅಥವಾ ಪತ್ನಿ ವಾಸವಾಗಿರುವ ಬ್ಲಾಕ್‌ಗೆ ಭೌಗೋಳಿಕವಾಗಿ ತಾಗಿದಂತಿರುವ ಬ್ಲಾಕ್‌ಗಳಲ್ಲಿ (ಬೇರೆ ಜಿಲ್ಲೆಗಳಲ್ಲಿದ್ದರೂ) ಖಾಲಿ ಇರುವ ಹುದ್ದೆಗಳಿಗೆ ವರ್ಗಾವಣೆ ಕೋರ ಬಹುದಾಗಿದೆ. |

ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ